## ಮಕ್ಕಳಿಗಾಗಿ ಬೈಬಲ್
### ಅರ್ಪಿಸುವ

# ದಾನಿಯೇಲನು ಮತ್ತು ಕನಸಿನ ರಹಸ್ಯ




ಬರಹಗಾರರು: Edward Hughes
ಚಿತ್ರಲೇಖಕರು: Jonathan Hay
ಪದ್ಮಾ ಸೈಲೇಸ್: Vinay Shirol
ಅಳವಡಿಸುವವರು: Mary-Anne S.


60ರ 32ನೇ ಕಥೆ


**www.M1914.org**

***Bible for Children,*** *PO Box 3, Winnipeg, MB R3C 2G1 Canada*



ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು.
ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.


ಕನ್ನಡ

Kannada

ರಾಜನಾದ ನೆಬೂಕದ್ನೆಚ್ಚರನಿಗೆ ಕನಸುಬಿತ್ತು. ಆ ಕನಸು ಅವನನ್ನು ಬಹಳ ತೊಂದರೆಗೆ ಗುರಿಮಾಡಿತು. ದಾನಿಯೇಲನು ದೇವರ ಶಕ್ತಿಯಿಂದ ರಾಜನ ಕನಸಿನ ಅರ್ಥವನ್ನು ಹೇಳವುದಕ್ಕೆ ಶಕ್ತನಾದನು.



1

ದಾನಿಯೇಲನು ಮೊದಲನೆಯದಾಗಿ ಕನಸನ್ನು ಸರಿಯಾದ ರೀತಿಯಲ್ಲಿ ವಿವರಿಸಿದನು. ಓ ರಾಜನೇ 'ನೀನು ಕಂಡದ್ದು ಅದ್ಭುತ ಪ್ರತಿಮೆ, ಇದು ಭಯಂಕರವಾದ ರೂಪವನ್ನು ಹೊಂದಿದೆ' ಅಂದನು.



2


“ಆ ಪ್ರತಿಮೆಯ ತಲೆಯು ಅಪರಂಜಿಯಿಂದ ಮಾಡಲ್ಪಟ್ಟಿತ್ತು”
ಎಂದು ಹೇಳಿ ದಾನಿಯೇಲನು
ಮುಂದುವರಿಸಿದನು.
3


“ಅದರ ಎದೆ
ತೋಳುಗಳು ಬೆಳ್ಳಿ”
ಯಿಂದ ಮಾಡಲ್ಪಟ್ಟಿವೆ.
4


“ಅದರ ಹೊಟ್ಟೆ ಮತ್ತು ತೊಡೆಗಳು” ತಾಮ್ರದಿಂದ ಮಾಡಲ್ಪಟ್ಟಿವೆ.
5


“ಅದರ ಕಾಲುಗಳು ಕಬ್ಬಿಣದಿಂದ, ಪಾದಗಳು ಅರ್ಧ ಕಬ್ಬಿಣ ಮತ್ತು ಅರ್ಧ
ಮಣ್ಣಿನಿಂದ” ಮಾಡಲ್ಪಟ್ಟಿದ್ದವು.
6


ಪ್ರತಿಮೆಯ ಕುರಿತು ರಾಜನಿಗೆ ವಿವರಿಸಿದ ನಂತರ, ದಾನಿಯೇಲನು ಕನಸಿನ
ಉಳಿದ ಭಾಗವನ್ನು ಹೇಳಿದನು.
7


“ನೀನು ನೋಡುತ್ತಿರಲಾಗಿ ಒಂದು ಬಂಡೆಯು
ಕೈಗಳನ್ನು ಉಪಯೋಗಿಸದೆಯೇ ಒಡೆಯಲ್ಪಟ್ಟಿತು”
ಎಂದು ದಾನಿಯೇಲನು ರಾಜನಿಗೆ ಹೇಳಿದನು.
8


“ಆ ಗುಂಡು ಬಂಡೆಯು ಸಿಡಿದು
ಬಂದು ಆ ಪ್ರತಿಮೆಯ ಕಬ್ಬಿಣ
ಮಣ್ಣಿನ ಹೆಜ್ಜೆಗಳಿಗೆ ಬಡಿದು
ಚೂರು ಚೂರು ಮಾಡಿದು.”
9
“ಆಗ ಪ್ರತಿಮೆ ಮಣ್ಣಿನಲ್ಲಿ ಪುಡಿಪುಡಿಯಾಗಿ
ಹೊಟ್ಟಿನಂತಾಯಿತು. ದಾನಿಯೇಲನು
ತಡೆದನು. ಪ್ರತಿಮೆಗೆ ಬಡಿದ ಆ ಬಂಡೆಯು
ಮಹಾಪರ್ವತವಾಗಿ ಲೋಕದಲ್ಲೆಲ್ಲಾ
ತುಂಬಿಕೊಂಡಿತು.”
10
ರಾಜನು ವಿಸ್ಮಯಗೊಂಡನು, ತಾನು ಕಂಡ ಕನಸು ಅದು ಸರಿಯಾಗಿಯೇ ಇತ್ತು.
ಇದು ದಾನಿಯೇಲನಿಗೆ ಹೇಗೆ ಗೊತ್ತು? ದೇವರು ಮಾತ್ರವೇ ದಾನಿಯೇಲನಿಗೆ
ಹೇಳಿದನು. ನಂತರ ದಾನಿಯೇಲನು ರಾಜನಾದ ನೆಬೂಕದ್ನೆಚ್ಚರನು ಕಂಡ ಕನಸಿನ
ಅರ್ಥವನ್ನು ಹೇಳಲು ಪ್ರಾರಂಭಿಸಿದನು.
11
“ಪರೋಕದ ದೇವರು ನಿನಗೆ
ರಾಜ್ಯ ಬಲಪರಾಕ್ರಮ
ವೈಭವಗಳನ್ನು
ಕೊಟ್ಟಿದ್ದಾನೆ.
ನೀನೇ ಆ ಬಂಗಾರದ ತಲೆ”
ಎಂದು ದಾನಿಯೇಲಸು
ರಾಜನಿಗೆ ಹೇಳಿದನು.
12
ದಾನಿಯೇಲನು ರಾಜನಿಗೆ
ನಿನ್ನ ಬಂಗಾರದ ರಾಜ್ಯವು
ಕೊನೆಯಾಗುತ್ತದೆ. ಪ್ರತಿಮೆಯ
ಬೆಳ್ಳಿಯ ಭಾಗವು ಅಂದರೆ
ದುರ್ಬಲವಾದ ರಾಜ್ಯವು
ಅದರ ಸ್ಥಳವನ್ನು
ಆಕ್ರಮಿಸಿಕೊಳ್ಳುತ್ತದೆ
ತಾಮ್ರ ಅಂದರೆ
ಅದು ಬೇರೊಂದು
ರಾಜ್ಯದಾಗಿರುತ್ತದೆ.
ರಾಜ್ಯ 1
ರಾಜ್ಯ 2
ರಾಜ್ಯ 3
ರಾಜ್ಯ 4
13
ಮತ್ತು ಕಬ್ಬಿಣ ಮತ್ತು
ಮಣ್ಣು ನಾಲ್ಕನೇ
ರಾಜ್ಯವಾಗಿ
ನಿಲ್ಲುತ್ತದೆ.
ರಾಜ್ಯ 1
ರಾಜ್ಯ 2
ರಾಜ್ಯ 3
ರಾಜ್ಯ 4
14



ಕೊನೆಯದಾಗಿ ದಾನಿಯೇಲನು ರಾಜನಿಗೆ ಈ ವಿಷಯವನ್ನು ತಿಳಿಸಿದನು. "ಪರಲೋಕ ದೇವರು ಒಂದು ರಾಜ್ಯ ವನ್ನು ಸ್ಥಾಪಿಸುವನು ಅದು ಎಂದಿಗೂ ಅಳಿಯದು".

15



ದಾನಿಯೇಲನಿಗೆ ದೇವರೊಬ್ಬನೇ ಈ ಕನಸಿನ ಅರ್ಥವನ್ನು ತಿಳಿದುಕೊಳ್ಳಲು ಜ್ಞಾನವನ್ನು ದಯಪಾಲಿಸಿದ್ದಾನೆಂಬುದಾಗಿ ರಾಜನು ತಿಳಿದುಕೊಂಡನು. ನೆಬೂಕದ್ನೆಚ್ಚರನು ಅವನಿಗೆ ಅಮೂಲ್ಯವಾದ ಬಹುಮಾನಗಳನ್ನು ಕೊಟ್ಟು ರಾಜ್ಯದಲ್ಲಿ ಮುಖ್ಯಸ್ಥನನ್ನಾಗಿ ನೇಮಿಸಿದನು.

16



1, 2, 3 ನೇ ರಾಜ್ಯಗಳು ಬಂದು ಹೋಗುತ್ತದೆ.

17



೪ನೇ ರಾಜ್ಯದ ನಂತರ ದೇವರ ರಾಜ್ಯವು ಬರುತ್ತದೆ ಮೆಸ್ಸೀಯನು ಲೋಕವನ್ನು ಆಳುತ್ತಾನೆ. ಅದು ಬೇಗನೇ ಆಗಬಹುದು.

18

ದಾನಿಯೇಲನು ಮತ್ತು ಕನಸಿನ ರಹಸ್ಯ

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ದಾನಿಯೇಲ **2**

**"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."**
**ಕೀರ್ತನೆ 119:130**

**ನಾವು ಕೆಟ್ಟದಾದ ಕಾರ್ಯಗಳನ್ನು ಮಾಡಿದ್ದೇವೆಂದು ದೇವರು ತಿಳಿದಿರುವನು. ಈ ಕೆಟ್ಟ ಕಾರ್ಯಗಳನ್ನು ಆತನು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ.**

**ದೇವರು ನಮ್ಮನ್ನು ತುಂಬಾ ಪ್ರೀತಿಸುವದರಿಂದ ತನ್ನ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ನಮ್ಮ ಪಾಪದ ಆ ಶಿಕ್ಷೆಯನ್ನು ಆತನು ತನ್ನ ಮೇಲೆ ಹೊತ್ತು ಕೊಂಡು ಶಿಲುಬೆಯ ಮೇಲೆ ಪ್ರಾಣಕೊಡುವಂತೆ ಮಾಡಿದನು. ಆತನು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋಗಿದ್ದಾನೆ. ಯೇಸುಕ್ರಿಸ್ತನ ಮೂಲಕ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ.**

**ನೀನು ನಿನ್ನ ಪಾಪಗಳಿಂದ ದೇವರ ಕಡೆಗೆ ತಿರುಗುವದಾದರೆ ಆತನಿಗೆ ಹೀಗೆ ಹೇಳು; ಪ್ರೀತಿಯುಳ್ಳ ದೇವರೇ, ಯೇಸುಕ್ರಿಸ್ತನು ನನ್ನ ಪಾಪಕ್ಕಾಗಿ ಸತ್ತು, ತಿರುಗಿ ಎದ್ದು ಬಂದು ಜೀವಿಸುತ್ತಿದ್ದಾನೆ ಎಂದು ನಂಬುತ್ತೇನೆ. ನೀನು ನನ್ನ ಹೃದಯದೊಳಗೆ ಬಂದು ನನ್ನ ಪಾಪಗಳನ್ನು ಕ್ಷಮಿಸು. ಈ ಮೂಲಕ ನಾನು ಹೊಸ ಜೀವಿತವನ್ನು ಪಡೆದುಕೊಂಡು ನಿನ್ನೊಂದಿಗೆ ಸದಾ ಜೀವಿಸುವೆನು. ನಿನ್ನ ಮಗನಾಗಿ ನಿನಗಾಗಿ ಜೀವಿಸಲು ನನಗೆ ಸಹಾಯ ಮಾಡು. ಆಮೆನ್. ಯೋಹಾನ 3:16**

**ನೀನು ಪ್ರತಿ ದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು.**